ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 144/2023 C/w 138/2024**

| ಸಾಕ್ಷಿಯ ಹೆಸರು | ಮಾಸ್ಟರ್ ಕೌಶಿಕ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ವಸಂತ್ | 4 | 3 |
| ವಯಸ್ಸು | 15 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **19.08.2026.** | |
| ಉದ್ಯೋಗ | ವಿದ್ಯಾರ್ಥಿ | | |
| ವಾಸ ಸ್ಥಳ | ಏಕದಂತ ನಗರ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈ ಸಾಕ್ಷಿ ಅಪ್ರಾಪ್ತ ವಯಸ್ಸಿನ ಬಾಲಕನಾಗಿದ್ದು ಈ ಕೆಳಕಂಡ ಪ್ರಶ್ನೆಗಳನ್ನು ಕೇಳಲಾಯಿತು.

ಪ್ರಶ್ನೇ 1 : ಈ ದಿನ ನೀನು ಎಲ್ಲಿಗೆ ಬಂದಿದ್ದೀಯಾ ?
ಉತ್ತರ : ನ್ಯಾಯಾಲಯಕ್ಕೆ

ಪ್ರಶ್ನೇ 2 : ನ್ಯಾಯಾಲಯದ ಮುಂದೆ ನಿಜ ಹೇಳಬೇಕೋ ಸುಳ್ಳು ಹೇಳಬೇಕೋ ?
ಉತ್ತರ : ನಿಜ ಹೇಳಬೇಕು.

ಪ್ರಶ್ನೇ 3 : ಸುಳ್ಳು ಹೇಳಿದರೆ ಏನಾಗುತ್ತದೆ?
ಉತ್ತರ : ಸುಳ್ಳು ಹೇಳಿದರೆ ಶಿಕ್ಷ ವಿಧಿಸಲಾಗುತ್ತದೆ.

(ಈ ಸಾಕ್ಷಿಯು ಮೇಲೆ ಹೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರವನ್ನು ಗಮನಿಸಿದರೆ ಸಾಕಷ್ಟು ಲೋಕಿಕ ಜ್ಞಾನ ಪಡೆದಿದ್ದರಿಂದ ಈ ಸಾಕ್ಷಿಯನ್ನು ಅರ್ಹ ಸಾಕ್ಷಿಯೆಂದು ಪರಿಗಣಿಸಿ ಪ್ರಮಾಣ ವಚನ ಭೋಧಿಸಲಾಯಿತು )

ನನಗೆ ಆರೋಪಿತರ ಪರಿಚಯ ಇದೆ, ಅವರು ನನ್ನ ಸಂಬಂಧಿಕರು. ಚಾಸಾ. 1 ಮತ್ತು 2 ರವರು ನನ್ನ ತಂದೆ ತಾಯಿ. ಚಾಸಾ. 4 ನನ್ನ ಅಕ್ಕ. ಆರೋಪಿತರು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಸುಮಾರು 2 – 3 ವರ್ಷಗಳ ಹಿಂದೆ ನಾನು 5 ನೇ ತರಗತಿಯಲ್ಲಿ ಓದುತ್ತಿದ್ದು ಬೆಳಗಿನ ಜಾವ 4.30

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಕೋಲು ಮತ್ತು ಮಚ್ಚಿನಿಂದ ಹೊಡೆದರು. ನನ್ನ ತಂದೆಯ ತಲೆಗೆ ಏಟಾಗಿತ್ತು. ನಂತರ ಅವರನ್ನು ಅತಿಶೆಯ ಆಸ್ಪತ್ರೆಗೆ ಸೇರಿಸಿದ್ದರು. ನನ್ನ ತಂದೆ ಹಾಗೂ ಆರೋಪಿತರು ಫೋನ್ ನಲ್ಲಿ ಜಗಳ ಮಾಡಿದ್ದು ಆದ್ದರಿಂದ ಆರೋಪಿತರು ಬಂದು ನನ್ನ ತಂದೆಗೆ ಹಲ್ಲೆ ಮಾಡಿದ್ದರು. ಯಾವ ವಿಚಾರಕ್ಕೆ ಜಗಳ ಮಾಡಿದ್ದರು ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ ರಿಪೀಸ್ ಪಟ್ಟಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು.

2. 1 ಮತ್ತು 2 ನೇ ಅರೋಪಿತರನ್ನು ತೋರಿಸಿ ಅವರು ನಮ್ಮ ತಂದೆಗೆ ರಿಪೀಸ್ ಪಟ್ಟಿಯಿಂದ ಹಲ್ಲೆ ಮಾಡುತ್ತಿದ್ದರು. 4 ನೇ ಆರೋಪಿ ಕೈಗಳಿಂದ ಹಲ್ಲೆ ಮಾಡಿದ್ದರು. ಉಳಿದ ಆರೋಪಿತರು ಕಾರಿನಿಂದ ಇಳಿದು ಬಂದರು. ಹಲ್ಲೆ ಮಾಡಿ ಆರೋಪಿತರು ಹೊರಟು ಹೋದರು. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿದ್ದರು.

(ಈ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರು ನನ್ನ ತಂದೆಗೆ ಕಲ್ಲಿನಿಂದ ಸಹ ಹೊಡೆದರು ಎಂದರೆ ಸರಿ. ದಿನಾಂಕ 20.08.2022 ರಂದು ಬೆಳಗಿನ ಜಾವ 4.00 ಕ್ಕೆ ಆರೋಪಿತರು ಬಂದು ನನ್ನ ತಂದೆಯ ಜೊತೆಗೆ ಗಲಾಟೆ ಮಾಡಿ ರಿಪೀಸ್ ಪಟ್ಟಿ ಹಾಗೂ ಕಲ್ಲಿನಿಂದ ಹೊಡೆದರು ಎಂದರೆ ಸರಿ. ಕಲ್ಲನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು.ಮಾ. 2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ. **MJR** ವಕೀಲರಿಂದ :

ನಾನು ಏಕದಂತ ನಗರದಲ್ಲಿ ವಾಸ ಇಲ್ಲ ಎಂದರೆ ಸರಿ ಅಲ್ಲ. ನಾನು ನನ್ನ ತಂದೆ ತಾಯಿ ಜೊತೆಗ ವಾಸ ಇದ್ದೇನೆ. ನಾನು ನನ್ನ ತಂದೆ ತಾಯಿ ಜೊತೆಗೆ ಗುಡ್ಡದಹಳ್ಳಿಯಲ್ಲಿ ವಾಸ ಇದ್ದೇನೆ ಎಂದರೆ ಸರಿ ಅಲ್ಲ. ನಮ್ಮ ತಂದೆಗೆ ಮುದ್ದೆ ಮಾಲು 2 ರಿಂದ ಹೊಡೆದಿಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ನಮ್ಮ ತಂದೆ ಗಾಡಿಯಿಂದ ಬಿದ್ದು ಏಟು ಮಾಡಿಕೊಂಡಿದ್ದರು ಎಂದರೆ ಸರಿ ಅಲ್ಲ. ನನ್ನ ತಂದೆ ರಿಯಲ್ ಎಸ್ಟೇಟ್ ಮಾಡುತ್ತಿಲ್ಲ ಮತ್ತು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ನನ್ನ ತಂದೆ ತಾಯಿ ಮತ್ತು ನನ್ನ ಅಕ್ಕ ಸರಿ ಸಾಕ್ಷಿ ನುಡಿದಿದ್ದು ನಾನು ಬೇಕು ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ ಅಲ್ಲ. ನಾನು ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ಘಟನೆ ಬಗ್ಗೆ ಹೇಳಿದ್ದೇನೆ. ಘಟನೆ ನಡೆದಾಗ ನಾನು, ನನ್ನ ಅಕ್ಕ ಹಾಗೂ ಅಪ್ಪ ಮನೆಯಲ್ಲಿ ಇದ್ದು ಹಾಗೂ ಅಮ್ಮ ಕಾರ್ಯಕ್ರಮಕ್ಕೆ ಹೋಗಿದ್ದೆವು.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.